# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 869 |
| ಸದಸ್ಯರ ಹೆಸರು | : | ಶ್ರೀ ಕೆ. ಎಸ್. ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 26-12-2022 |
| ಉತ್ತರಿಸುವ ಸಚಿವರು | : | ಮಾನ್ಯ ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು |

***

| | ಪ್ರಶ್ನೆ | ಉತ್ತರ |
|---|---|---|
| ಅ) | ಚಿತ್ರದುರ್ಗ ಮತ್ತು ದಾವಣಗೆರೆ ಜಿಲ್ಲೆಯಲ್ಲಿ ಅಳವಡಿಸಲಾಗಿರುವ ಪವನ ವಿದ್ಯುಚ್ಛಕ್ತಿ, (WIND MILL) ಯಂತ್ರಗಳ ಸಂಖ್ಯೆ ಎಷ್ಟು; ಮತ್ತು LEASE ಭೋಗ್ಯ ಅವಧಿ ಎಷ್ಟು; | ಇದುವರೆಗೂ ಚಿತ್ರದುರ್ಗ ಜಿಲ್ಲೆಯಲ್ಲಿ 798 ಪವನ ವಿದ್ಯುತ್ ಘಟಕಗಳಿಂದ 671.710 ಮೆ.ವ್ಯಾ ಹಾಗೂ ದಾವಣಗೆರೆ ಜಿಲ್ಲೆಯಲ್ಲಿ 329 ಪವನ ವಿದ್ಯುತ್ ಘಟಕಗಳಿಂದ 510.4 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಗಳು ಅನುಷ್ಠಾನಗೊಂಡಿರುತ್ತದೆ<br>ಪವನ ವಿದ್ಯುತ್ ಯೋಜನೆಗಳನ್ನು ಅನುಷ್ಠಾನಗೊಳಿಸಲು ಅರಣ್ಯ/ಕಂದಾಯ/ಖಾಸಗಿ ಜಮೀನುಗಳನ್ನು ಗುತ್ತಿಗೆ ಪಡೆಯುತ್ತಿದ್ದು, ಅರಣ್ಯ ಜಮೀನುಗಳ ಗುತ್ತಿಗೆ ಅವಧಿ 10 ರಿಂದ 30 ವರ್ಷಗಳವರೆಗೆ, ಕಂದಾಯ ಜಮೀನುಗಳ ಗುತ್ತಿಗೆ ಅವಧಿ 30 ವರ್ಷಗಳವರೆಗೆ ಹಾಗೂ ಖಾಸಗಿ ಜಮೀನುಗಳ ಗುತ್ತಿಗೆ ಅವಧಿ 29 ವರ್ಷಗಳವರೆ ಗೆ ಇರುತ್ತದೆ. |
| ಆ) | ಪ್ರಸ್ತುತ ಪವನ ವಿದ್ಯುಚ್ಛಕ್ತಿ ಖರೀದಿ ಮಾಡುತ್ತಿರುವ ಪ್ರತಿ ಯೂನಿಟ್ಟಿನ ಬೆಲೆ ಎಷ್ಟು? | ಚಿತ್ರದುರ್ಗ ಮತ್ತು ದಾವಣಗೆರೆ ಜಿಲ್ಲೆಯಲ್ಲಿ ಅಳವಡಿಸಲಾಗಿರುವ ಪವನ ವಿದ್ಯುತ್ ಘಟಕಗಳಿಂದ (WIND MILL) ವಿದ್ಯುತ್ ಸರಬರಾಜು ಕಂಪನಿಗಳು ಖರೀದಿಸಿದ ಪ್ರತಿ ಯೂನಿಟ್‌ನ ಸರಾಸರಿ ವಿದ್ಯುತ್ ದರದ ವಿವರಗಳು ಕೆಳಕಂಡಂತಿವೆ. |

| | ಸರಾಸರಿ ಖರೀದಿ ದರ (ಪ್ರತಿ ಯೂನಿಟ್ ರೂ.ಗಳಲ್ಲಿ) | |
|---|---|---|
| **ಕಂಪನಿ** | **ಚಿತ್ರದುರ್ಗ ಜಿಲ್ಲೆ** | **ದಾವಣಗೆರೆ ಜಿಲ್ಲೆ** |
| ಬೆಸ್ಕಾಂ | 3.55 | 3.68 |
| ಮೆಸ್ಕಾಂ | 3.40 | 3.40 |
| ಹೆಸ್ಕಾಂ | -- | 3.40 |
| ಜೆಸ್ಕಾಂ | -- | 3.74 |
| ಸೆಸ್ಕ್ | -- | -- |

ಹೆಸ್ಕಾಂ ಮತ್ತು ಜೆಸ್ಕಾಂ ಕಂಪನಿಯು ಚಿತ್ರದುರ್ಗ ಜಿಲ್ಲೆಯಲ್ಲಿ ಅಳವಡಿಸಲಾಗಿರುವ ಪವನ ವಿದ್ಯುತ್ ಘಟಕಗಳಿಂದ (WIND MILL) ಯಾವುದೇ ವಿದ್ಯುತ್ ಖರೀದಿ ಕರಾರು ಮಾಡಿಕೊಂಡಿರುವುದಿಲ್ಲ.

ಸೆಸ್ಕ್ ಕಂಪನಿಯು ಚಿತ್ರದುರ್ಗ ಮತ್ತು ದಾವಣಗೆರೆ ಜಿಲ್ಲೆಯಲ್ಲಿ ಅಳವಡಿಸಲಾಗಿರುವ ಪವನ ವಿದ್ಯುತ್ ಘಟಕಗಳಿಂದ ಯಾವುದೇ ವಿದ್ಯುತ್ ಖರೀದಿ ಕರಾರು ಮಾಡಿಕೊಂಡಿರುವುದಿಲ್ಲ.

ಸಂಖ್ಯೆ: ಎನರ್ಜಿ 272 ಇಬಿಎಸ್ 2022

(ವಿ. ಸುನೀಲ್ ಕುಮಾರ್)
ಇಂಧನ ಹಾಗೂ ಕನ್ನಡ ಮತ್ತು
ಸಂಸ್ಕೃತಿ ಸಚಿವರು